
# ಸರ್ಕಾರಿ ಪ್ರೌಢಶಾಲೆ ಕಣಮೇಶ್ವರ

## ತಾ|| ಜೇವರ್ಗಿ ಜಿ|| ಕಲಬುರಗಿ




# 10ನೇ ತರಗತಿ

# ವಿಜ್ಞಾನ ಕ್ರಿಯಾ ಯೋಜನೆ 2020-21




ಮುಖ್ಯ ಶಿಕ್ಷಕರು: ಶ್ರೀ. ಬಿ.ಬಿ. ಹಿರೇಗೌಡರ

ವಿಷಯ ಶಿಕ್ಷಕರು : ಶ್ರೀ. ರಮೇಶ ಮೂಡಲಗಿ ಎಂ.ಎಸ್ಸಿ,,,ಬಿ.ಇಡಿ



**Use E-Papers, Save Trees**

**Above line hide when print out**

# ವಿಜ್ಞಾನ ಕ್ರಿಯಾಯೋಜನೆ 2020–20

| | |
|---|---|
| ಪರೀಕ್ಷೆ ಪ್ರಾರಂಭ | ಏಪ್ರಿಲ್ 2020 |
| ಉದ್ದೇಶ | ಈಗಿನ ಫಲಿತಾಂಶವನ್ನು ಉತ್ತಮಪಡಿಸುವುದು ಅಂದರೆ 100ಕ್ಕೆ 100 ಫಲಿತಾಂಶವನ್ನು ಪಡೆಯುವುದು ಹಾಗೂ ಗುಣಮಟ್ಟದ ಶಿಕ್ಷಣದ ನಿರ್ವಹಣೆ ಮಾಡುವುದು |
| ನಿಗದಿಪಡಿಸಿದ ಅಥವಾ ನಿರೀಕ್ಷಿಸಿರುವ ಗುರಿ | 100% |
| ಸಿದ್ಧಪಡಿಸಿದ ವಿಷಯ<br>ಶಿಕ್ಷಕರ ಹೆಸರು | ವಿಜ್ಞಾನ<br>ಶ್ರೀ. ರಮೇಶ . ಈ. ಮೂಡಲಗಿ |
| ಸಹಬಾಗಿತ್ವ | ಶಾಲಾ ಮುಖ್ಯಸ್ಥರು ಮತ್ತು ಶಿಕ್ಷಕವೃಂದ, ವಿದ್ಯಾರ್ಥಿಗಳು, ಪೋಷಕರು ಮತ್ತು ಎಸ್.ಡಿ.ಎಂ.ಸಿ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ. |
| | |

Use E-Papers, Save Trees

Above line hide when print out

# ಸರ್ಕಾರಿ ಪ್ರೌಢಶಾಲೆ ಕಣಮೇಶ್ವರ ತಾ॥ ಜೇವರ್ಗಿ

## ಫಲಿತಾಂಶ ವಿಶ್ಲೇಷಣೆ

| ಕ್ರ.ಸಂ | ವರ್ಷ | ಪರೀಕ್ಷೆಗೆ ಹಾಜರಾದವರು | ಉತ್ತೀರ್ಣರಾದವರು | ಶಾಲಾ ಫಲಿತಾಂಶ | ವಿಜ್ಞಾನ ವಿಷಯ ಫಲಿತಾಂಶ |
|---|---|---|---|---|---|
| 1 | 2014–15 | | | | |
| 2 | 2015–16 | | | | |
| 3 | 2016–17 | | | | |
| 4 | 2017–18 | | | | |
| 5 | 2018–19 | | | | |
| 6 | 2019–20 | | | | |

Use E-Papers, Save Trees

Above line hide when print out

# 2020–21 ನೇ ಸಾಲಿನ ಯೋಜಿತ ಕಾರ್ಯಕ್ರಮಗಳು

| ಕ್ರ.ಸಂ | ಯೋಜಿತ ಅಂಶಗಳು |
|---|---|
| 1 | ವಿದ್ಯಾರ್ಥಿಗಳ ದಿನವಹಿ ಅಭ್ಯಾಸ ವೇಳಾಪಟ್ಟಿ |
| 2 | ಬೆಂಚ್ ಲೀಡರ್ ವ್ಯವಸ್ಥೆ. |
| 3 | ದತ್ತಕ ಯೋಜನೆ. |
| 4 | ಗುಂಪು ಅಧ್ಯಯನ |
| 5 | ವಿಶೇಷ ತರಗತಿ. |
| 6 | ಪ್ರಶ್ನೆ ಪತ್ರಿಕೆ ವಿನ್ಯಾಸ ಪರಿಚಯ. |
| 7 | ಪರೀಕ್ಷೆಗೆ ಉಳಿದಿರುವ ದಿನಗಳ ಬಗ್ಗೆ ನೆನಪು ಮಾಡುವುದು. |
| 8 | ಪೋಷಕರ ಸಭೆ. |
| 9 | ದೂರವಾಣಿ ಕಾರ್ಯಕ್ರಮ. |
| 10 | ಮನೆ ಭೇಟಿ ಕಾರ್ಯಕ್ರಮ. |
| 11 | ಪಠ್ಯವಸ್ತು ರಸ ಪ್ರಶ್ನೆ ಕಾರ್ಯಕ್ರಮ. |
| 12 | ಸಂಭವನೀಯ ಸ್ರತ್ರಗಳ ಅಭ್ಯಾಸ. |
| 13 | ಇಲಾಖೆ ಒದಗಿಸಿರುವ ಅಭ್ಯಾಸ ಪತ್ರಿಕೆಗಳನ್ನು ಬರೆಸುವುದು. |
| 14 | ಘಟಕ ಮತ್ತು ಕಿರು ಪರೀಕ್ಷೆಗಳು. |
| 15 | ಮಕ್ಕಳ ಆರೋಗ್ಯದ ಬಗ್ಗೆ ಕಾಳಜಿ |

Use E-Papers, Save Trees
Above line hide when print out

| | |
|---|---|
| 2018 – 19 ನೇ ಸಾಲಿನ ವಿಜ್ಞಾನ ಶೇಕಡಾವಾರು ಫಲಿತಾಂಶ | 92.10 % |
| ಉದ್ದೇಶ | ಈಗಿನ ಶೇ % ಫಲಿತಾಂಶವನ್ನು ಹೆಚ್ಚಿಸಿಕೊಳ್ಳುವುದು ಹಾಗೂ ಗುಣಮಟ್ಟದ ಶಿಕ್ಷಣದ ನಿರ್ವಹಣೆ ಮಾಡುವುದು |
| ನಿಗದಿಪಡಿಸಿದ ಅಥವಾ ನಿರೀಕ್ಷಿಸಿರುವ ಗುರಿ | 100% |

1 ) ವಿಶೇಷ ಬೋಧನೆಯ ಅಗತ್ಯವುಳ್ಳ ವಿದ್ಯಾರ್ಥಿಗಳನ್ನು ಇನ್ನೊಂದು ತರಗತಿಯಲ್ಲಿರಿಸಿ,ಬೋದನೆ ಹಾಗೂ ವಿಷಯವನ್ನು ಸರಳವಾಗಿ ಬೋದಿಸಿ,ಪ್ರಶ್ನೆಗಳಿಗೆ ಉತ್ತರಗಳನ್ನು ಸರಳಗೊಳಿಸುವುದು.

2 ) ಪ್ರಯೋಗಗಳನ್ನು ಮಾಡಿ ತೋರಿಸಿ ಪಾಠಗಳನ್ನು ಮನದಟ್ಟು ಮಾಡುವುದರ ಜೊತೆಗೆ ವಿಷಯದೆಡೆಗೆ ಆಸಕ್ತಿಯನ್ನು ಹೆಚ್ಚಿಸುವುದು.

3 ) ಪಿಪಿಟಿ ಗಳನ್ನು ತೋರಿಸಿ ಪಾಠಗಳನ್ನು ಮನದಟ್ಟು ಮಾಡುವುದರ ಜೊತೆಗೆ ವಿಷಯದೆಡೆಗೆ ಆಸಕ್ತಿಯನ್ನು ಹೆಚ್ಚಿಸುವುದು.

4 ) ಪಾಠಗಳನ್ನು ನಿಗದಿ ಪಡಿಸಿದ ಡಿಸೆಂಬರ್ ಮಾಹೆಯ ಅಂತ್ಯದೊಳಗೆ ಮುಕ್ತಾಯಗೊಳಿಸಿ, ಪರೀಕ್ಷೆಯಲ್ಲಿ ಉತ್ತೀರ್ಣಕ್ಕಾಗಿ ತಯಾರುಗೊಳಿಸುವುದು.

5 ) ಪ್ರತಿಯೊಂದು ಮಗುವಿಗೂ ವಾರದ ಎಲ್ಲಾ ದಿನಗಳಂದು ಎರಡು ಚಿತ್ರ ಮತ್ತು ಎರಡು ಉತ್ತರಗಳನ್ನು ಕಲಿಯುವಂತೆ ಮಾಡುವುದು.

6 ) ವಿಷಯಕ್ಕೆ ಹಂಚಿಕೆಯಾದ ದಿನಗಳಂದು ಬೆಳಿಗ್ಗೆ ಮತ್ತು ಸಂಜೆ ವಿಶೇಷ ತರಗತಿಗಳನ್ನು ತೆಗೆದುಕೊಳ್ಳುವುದು.

7 ) ಕಿರು ಪರೀಕ್ಷೆಗಳನ್ನು ಆಗಾಗ ನಡೆಸುವುದು.

8 ) ವಿಷಯಕ್ಕೆ ಹಂಚಿಕೆಯಾದ ಶನಿವಾರದ ದಿನಗಳಂದು ಮದ್ಯಾನ್ಹ ವಿಶೇಷ ತರಗತಿಗಳನ್ನು ತೆಗೆದುಕೊಳ್ಳುವುದು.

9 ) ಹಿಂದಿನ ವರ್ಷದ ಪ್ರಶ್ನೆ ಪತ್ರಿಕೆಗಳನ್ನು ಬಿಡಿಸುವುದು.

10) ಫಲಿತಾಂಶ ವೃದ್ಧಿಗೆ ಹೆಚ್ಚಿನ ಅಂಕಗಳಿಸಲು ಘಟಕವಾರು ಕಿರು ಹಾಗೂ ಸಂಕ್ಷಿಪ್ತ ಉತ್ತರ ಬರೆಯುವ ಪ್ರಶ್ನೆಗಳನ್ನು ಸಿದ್ದಪಡಿಸಿ ವಿದ್ಯಾರ್ಥಿಗಳಗೆ ಪುನರಾವರ್ತನೆ ಸಂದರ್ಭದಲ್ಲಿ ಪ್ರತಿದಿನ ಎರಡು ಅಧ್ಯಾಯಗಳಂತೆ ಗೃಹಕೆಲಸ ನೀಡಿ ಮರುದಿನ ಪರಿಶೀಲನೆ ಮಾಡುವುದು.

11 ) ವಾರಕ್ಕೊಮ್ಮೆ ಸಂಭವನೀಯ ಚಿತ್ರಗಳನ್ನು ಪರೀಕ್ಷೆ ನೀಡಿ ಪರಿಶೀಲಿಸಿ ಉತ್ತಮವಾಗಿ ಬರೆಯುವಂತೆ ಸಲಹೆ ನೀಡುವುದು.

12 ) ಅನ್ವಯಿಕ ಪ್ರಶ್ನೆಗಳನ್ನು ಅರ್ಥೈಸಿಕೊಂಡು ಉತ್ತರಿಸುವ ವಿಧಾನವನ್ನುತರಗತಿಯಲ್ಲಿ ಆಗಾಗ ಹೇಳುವುದು.

Use E-Papers, Save Trees
Above line hide when print out

# *ಪರೀಕ್ಷಾ ಪೂರ್ವಸಿದ್ಧತೆ *

2020–21 ನೇ ಸಾಲಿನ ಪ್ರಾರಂಭದಲ್ಲಿ ನಡೆದ ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕರ ಸಭೆಯಲ್ಲಿ ಏಪ್ರಿಲ್ 2019 ರಲ್ಲಿ ನಡೆಯುವ ಎಸ್.ಎಸ್.ಎಲ್.ಸಿ. ಪಬ್ಲಿಕ್ ಪರೀಕ್ಷೆಯಲ್ಲಿ ಈ ಹಿಂದಿನ ಅಂದರೆ 2018–19ನೇ ಸಾಲಿನಲ್ಲಿ ಪಡೆದ 93.75% ಫಲಿತಾಂಶವನ್ನು 100% ಕ್ಕೆ ಹೆಚ್ಚಿಸುವುದು ಮತ್ತು ಗುಣಮಟ್ಟದ ಶಿಕ್ಷಣವನ್ನು ನೀಡುವ ಉದ್ದೇಶದ ಬಗ್ಗೆ ಚರ್ಚಿಸಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ತೀರ್ಮಾನ ಕೈಗೊಳ್ಳಲಾಯಿತು.

**ಸಮಯದ ಸದುಪಯೋಗ :**

ಮಕ್ಕಳು ಶಾಲೆಗೆ ಬೆಳಿಗ್ಗೆ ಬಂದ ನಂತರ ಬೆಳಗಿನ ವಿಶೇಷ ತರಗತಿ ಪ್ರಾರಂಭವಾಗುವ ಸಮಯದವರೆಗೂ ಕಾಲವ್ಯಯ ಮಾಡದಂತೆ ಅಭ್ಯಾಸದಲ್ಲಿ ತೊಡಗುವಂತೆ ಮುಂಚಿತವಾಗಿ ಬಂದಿರುವ ಶಿಕ್ಷಕರು ಉಸ್ತುವಾರಿ ವಹಿಸುವುದು. ಊಟದ ನಂತರ ಕಾಲಹರಣ ಮಾಡದಂತೆ ಮಕ್ಕಳಿಗೆ ತಿಳುವಳಿಕೆ ಮೂಡಿಸಿ ಗಮನಿಸುವುದು.

**ವಿದ್ಯಾರ್ಥಿಗಳ ದಿನವಹಿ ಅಭ್ಯಾಸ ವೇಳಾಪಟ್ಟಿ:**

ಪ್ರತಿಯೊಂದು ಮಗುವಿಗೂ ವಾರದ ಎಲ್ಲಾ ದಿನಗಳಂದು ಎಲ್ಲಾ ವಿಷಯಗಳನ್ನೂ ಪ್ರತಿದಿನ ಲಭ್ಯವಿರುವ ಅವಧಿಯಲ್ಲಿ ಅವರದೇ ಆದ್ಯತೆಯಂತೆ ವಿಷಯಗಳನ್ನು ಹಂಚಿಕೊಂಡು ಸಮಯದ ಸದುಪಯೋಗ ಪಡಿಸಿಕೊಳ್ಳಲು ಮುದ್ರಿತ ವೇಳಾಪಟ್ಟಿಯನ್ನು ನೀಡಿ
ಆದ್ಯತೆಯ ಮೇರೆಗೆ ಸಮಯ ಹಂಚಿಕೆ ಮಾಡಿ ಅಧ್ಯಯನ ಮಾಡಲು ತಿಳುವಳಿಕೆ ನೀಡಿ ಮತ್ತು ವಿಷಯ ಶಿಕ್ಷಕರುಗಳು ಗಮನಿಸುವುದು.

**ಬೆಂಚ್ ಲೀಡರ್ ವ್ಯವಸ್ಥೆ :**

ತರಗತಿಯಲ್ಲಿ ಪ್ರತಿ ಬೆಂಚ್‌ಗೂ ಒಬ್ಬ ಉತ್ತಮ ಪ್ರಗತಿ ಹೊಂದಿರುವ ವಿದ್ಯಾರ್ಥಿಯನ್ನು ನಾಯಕನನ್ನಾಗಿ ಆಯ್ಕೆಮಾಡಿ ಉಳಿದ ಮಕ್ಕಳ ಪ್ರಗತಿ ಪರಿಶೀಲಿಸಿ ಅವರೂ ಸಹ ಪ್ರಗತಿ ಹೊಂದಲು ಅವಕಾಶ ಮಾಡಿಕೊಡಲಾಗಿದೆ.

**ದತ್ತು ಯೋಜನೆ :**

ಪ್ರತಿ ವರ್ಷದಂತೆ ಈ ಸಾಲಿನಲ್ಲಿಯೂ ಮಕ್ಕಳ ಪ್ರಗತಿಯ ಆಧಾರದ ಮೇಲೆ ಮಿಶ್ರಮಾಡಿ 5 ರಿಂದ 6 ಮಕ್ಕಳ ಗುಂಪುಮಾಡಿ ಎಲ್ಲಾ ಶಿಕ್ಷಕರಿಗೂ (ದೈಹಿಕ ಮತ್ತು ಚಿತ್ರಕಲಾ ಶಿಕ್ಷಕರನ್ನೂ ಸೇರಿಸಿ) ಒಂದೊಂದು ಗುಂಪಿನ ಉಸ್ತುವಾರಿ ವಹಿಸಿ, ಪ್ರತಿದಿನ ಆ ಮಕ್ಕಳ ಗುಂಪು ಅಧ್ಯಯನಕ್ಕೆ ಅನುವು ಮಾಡುವುದು.

**ಗುಂಪು ಅದ್ಯಯನ :**

ಕ್ರಮ ಸಂಖ್ಯೆ 5 ರಂತೆ ಮಕ್ಕಳನ್ನು ಗುಂಪು ಮಾಡಿ ದತ್ತಕ ಯೋಜನೆಯಂತೆ ಶಿಕ್ಷಕರಿಗೆ ಉಸ್ತುವಾರಿ ವಹಿಸಿ , ಪ್ರತಿದಿನ ಆಯಾ ಗುಂಪಿನ ಮಕ್ಕಳ ಎಲ್ಲಾ ವಿಷಯಗಳಲ್ಲಿನ ಪ್ರಗತಿಯನ್ನು , ಅವರು ನಿರ್ವಹಿಸುತ್ತಿರುವ ಗೃಹಪಾಠ,ನೋಟ್ಸ್ ಹಾಗೂ ಹಾಜರಾತಿ ಬಗ್ಗೆ ಶಿಕ್ಷಕರು ಪರಿಶೀಲಿಸಿ ಅಭ್ಯಸಿಸಲು ನೆರವಾಗುವುದು.

Use E-Papers, Save Trees
Above line hide when print out

**ವಿಶೇಷ ತರಗತಿ :**

ಪ್ರತಿದಿನ ಬೆಳಿಗ್ಗೆ 9.00 ಗಂಟೆಯಿಂದ 10.00 ಗಂಟೆಯವರೆಗೆ ದಿನಕ್ಕೆ ಒಂದು ವಿಷಯದಂತೆ ವಿಷಯ ಶಿಕ್ಷಕರು ವಿಶೇಷ ತರಗತಿ ತೆಗೆದುಕೊಂಡು ಕ್ಲಿಷ್ಟಕರ ಅಧ್ಯಾಯಗಳನ್ನು ಮರುಬೋಧನೆ ಮಾಡುವುದು ಹಾಗೂ ಸಂಜೆ 4.10 ರಿಂದ 5.00 ಗಂಟೆಯವರೆಗೆ ಒಚಿದು ಅವಧಿಯಲ್ಲಿ ಪುನರಾವರ್ತನೆ ಅಥವಾ ಶಿಕ್ಷಕರ ಉಸ್ತುವಾರಿಯಲ್ಲಿ ಓದಿಸುವ ಕಾರ್ಯ ಹಮ್ಮಿಕೊಳ್ಳಲಾಗಿದೆ.

**ಪ್ರಶ್ನೆ ಪತ್ರಿಕೆ ವಿನ್ಯಾಸ ಪರಿಚಯ:**

2019–20 ರಲ್ಲಿ ಬದಲಾದ ಪರೀಕ್ಷೆಗೆ ಸಂಬಂಧಿಸಿದಂತೆ ಪ್ರಶ್ನೆ ಪತ್ರಿಕೆ ವಿನ್ಯಾಸವನ್ನು ಎಲ್ಲಾ ವಿಷಯಗಳಿಗೂ ಎಲ್ಲಾ ಮಕ್ಕಳಿಗೂ ನೀಡಿದ್ದು , ಎಷ್ಟು ಅಂಕ, ಎಷ್ಟು ಪ್ರಶ್ನೆ, ಯಾವ ರೀತಿಯ ಪ್ರಶ್ನೆಗಳು , ಯಾವ ಅಧ್ಯಾಯಕ್ಕೆ, ಯಾವ ಪ್ರಶ್ನೆಗೆ ಹೆಚ್ಚು ಒತ್ತು ನೀಡಬೇಕು ಎಂಬುದರ ಬಗ್ಗೆ ಆಯಾ ವಿಷಯ ಶಿಕ್ಷಕರು ಮಾರ್ಗದರ್ಶನ ನೀಡುತ್ತಿದ್ದಾರೆ.

**ಪರೀಕ್ಷೆಗೆ ಉಳಿದಿರುವ ದಿನಗಳ ಬಗ್ಗೆ ನೆನಪು ಮಾಡುವುದು.**

ಪ್ರತಿದಿನ ಪ್ರಾರ್ಥನೆಯ ನಂತರ ಪರೀಕ್ಷೆ ಇನ್ನು ಎಷ್ಟು ದಿನ ಉಳಿದಿದೆ ಎಂಬುದರ ಬಗ್ಗೆ ಅಂಕಿ ಅಂಶ ಹೇಳುವುದು. ತರಗತಿಯಲ್ಲಿ ಉಳಿಕೆ ದಿನಗಳನ್ನು ತೋರಿಸುವ ಹಾಗೂ ಪರೀಕ್ಷೆ ಬಗ್ಗೆ ಆತ್ಮವಿಶ್ವಾಸ, ಧೈರ್ಯತುಂಬುವ ವಾಕ್ಯಗಳೊಂದಿಗೆ ಫಲಕವನ್ನು ಪ್ರದರ್ಶಿಸುವುದು.

**ಪೋಷಕರ ಸಭೆ :**

ಪ್ರತಿ ತಿಂಗಳು ವಿಶೇಷವಾಗಿ 10ನೇ ತರಗತಿ ಮಕ್ಕಳ ಪೋಷಕರನ್ನು/ತಾಯಂದಿರನ್ನು ಕರೆಸಿ ಸಭೆ ನಡೆಸಿ, ಯಾವ ವಿಷಯದಲ್ಲಿ ತಮ್ಮ ಮಗು ಹಿಂದೆ ಇದ್ದಾನೆ , ಇನ್ನು ಮುಂದೆ ಹೇಗೆ ಓದಬೇಕು, ಮಕ್ಕಳ ಅಭ್ಯಾಸದಲ್ಲಿ ಪೋಷಕರ ಪಾತ್ರ ಶಿಕ್ಷಕರಷ್ಟೇ ಮುಖ್ಯ ಎಂಬುದನ್ನು ಮನವರಿಕೆ ಮಾಡಿಕೊಡುವುದು. ಮಕ್ಕಳ ಕಲಿಕೆಗೆ ಮನೆಯಲ್ಲಿ ಎಂತಹ ವಾತಾವರಣ ಇರಬೇಕು ಶಿಕ್ಷಕರೊಂದಿಗೆ ಪೋಷಕರ ಸಹಕಾರ ಹೇಗಿರಬೇಕು, ಹೀಗೆ ಹಲವಾರು ವಿಷಯಗಳನ್ನು ಚರ್ಚಿಸಿ ಅಭಿಪ್ರಾಯ ಹಂಚಿಕೊಳ್ಳಲಾಗುವುದು.

**ದೂರವಾಣಿ ಕಾರ್ಯಕ್ರಮ:**

10ನೇ ತರಗತಿಯ ಎಲ್ಲಾ ಮಕ್ಕಳ ಪೋಷಕರ ದೂರವಾಣಿ ಸಂಖ್ಯೆಗಳನ್ನು ಹಿಂದಿನ ವರ್ಷದಂತೆ ಈ ಸಾಲಿನಲ್ಲಿಯೂ ಸಂಗ್ರಹಿಸಿ ಪ್ರತಿದಿನ ರಾತ್ರಿ ಹಲವು ಮಕ್ಕಳ ಪೋಷಕರಿಗೆ ರಾತ್ರಿ 9.00 ಗಂಟೆಯ ನಂತರ ಕರೆಮಾಡಿ, ಅವರ ಮಗ/ಮಗಳು ಅಧ್ಯಯನದಲ್ಲಿ ತೊಡಗಿದ್ದಾನೆಯೇ ಹೇಗೆ ಎಂಬುದರ ಬಗ್ಗೆ ಚ್ಚರ್ಚಿಸುವುದು. ದಿನವಹಿ ಅಭ್ಯಾಸ ವೇಳಾಪಟ್ಟಿಯನ್ನು ಅನುಸರಿಸುತ್ತಿದ್ದಾನೆಯೇ ಹೇಗೆ ಅಭ್ಯಾಸಕ್ಕೆ ತೊಡಕಿದ್ದರೆ ಪೋಷಕರೊಡನೆ ಮಾತನಾಡಿ ಪರಿಹರಿಸಿ, ಶಿಕ್ಷಕರು ನಮ್ಮನ್ನು ಸದಾ ಗಮನಿಸುತ್ತಿದ್ದಾರೆ ಎಂಬ ಭಾವನೆಯನ್ನು ಮಕ್ಕಳಲ್ಲಿ ಉಂಟುಮಾಡುವುದರ ಮೂಲಕ ಮಕ್ಕಳಲ್ಲಿ ಆಸಕ್ತಿ ಮೂಡಿಸುವುದು.

Use E-Papers, Save Trees
Above line hide when print out

**ಮನೆ ಭೇಟಿ ಕಾರ್ಯಕ್ರಮ:**

ಎಲ್ಲಾ ಶಿಕ್ಷಕರೂ ರಾತ್ರಿ ಸಮಯದಲ್ಲಿ ಆದ್ಯತೆಯಮೇರೆಗೆ ಮಕ್ಕಳ ಮನೆಗಳಿಗೆ ಭೇಟಿ ನೀಡಿ ಅವರ ಅಭ್ಯಾಸದ ಕಡೆ ನಿಗಾ ವಹಿಸುವುದು, ಪೊಷಕರೊಡನೆ ಮಾತನಾಡಿ ಒಳ್ಳೆಯ ವಾತಾವರಣ ನಿರ್ಮಿಸುವುದು.

**ರಸ ಪ್ರಶ್ನೆ ಕಾರ್ಯಕ್ರಮ:**

ವಾರದಲ್ಲಿ ಒಂದು ವಿಷಯದಂತೆ ಪ್ರತಿ ಶನಿವಾರ ಮೊದಲೇ ತಿಳಿಸಿರುವ ವಿಷಯ ಮತ್ತು ಅದ್ಯಾಯಗಳಲ್ಲಿ ಚಿಕ್ಕ ಚಿಕ್ಕ ಪ್ರಶ್ನೆಗಳನ್ನು ತಯಾರು ಮಾಡಿಕೊಂಡು, ಹಾಲಿ ಇರುವ ಗುಂಪುಗಳಿಗೆ ರಸ ಪ್ರಶ್ನೆ ಕಾರ್ಯಕ್ರಮ ನಡೆಸಿ ಅಂಕ ನೀಡಿ ಉತ್ತಮ ಅಂಕ ಪಡೆದ ಗುಂಪಿನ ಬಗ್ಗೆ ಪ್ರಶಂಸೆ ನೀಡುವುದರ ಮೂಲಕ ಅಭ್ಯಾಸದಲ್ಲಿ ಅಸಕ್ತಿ ಮೂಡಿಸುವುದು.

**ವಿಜ್ಞಾನ ವಿಷಯದಲ್ಲಿ ಸಂಭವನೀಯ ಚಿತ್ರಗಳನ್ನು ಬರೆಸುವುದು.**

ವಿಜ್ಞಾನದಲ್ಲಿ ಬರುವ ಸಂಭವನೀಯ ಸೂತ್ರ ಹಾಗೂ ಚಿತ್ರಗಳನ್ನು ಸಮಯ ಸಿಕ್ಕಾಗ ಮತ್ತು ಪ್ರತಿ ಶನಿವಾರ ಭಾನುವಾರಗಳಂದು ಮನೆಯಲ್ಲಿ ಅಭ್ಯಾಸ ಮಾಡಿಕೊಂಡು ಒಮ್ಮೆ ಬರೆದುಕೊಂಡು ಬರುವಂತೆ ತಿಳಿಸುವುದು ಮತ್ತು ಬರೆದಿರುವ ಬಗ್ಗೆ ಪರಿಶೀಲಿಸುವುದು.

**ಇಲಾಖೆ ಒದಗಿಸುವ ಅಭ್ಯಾಸ ಪತ್ರಿಕೆಗಳನ್ನು ಬರೆಸುವುದು:**

ಇಲಾಖೆಯಿಂದ ಒದಗಿಸಲಾಗುವ ಅಭ್ಯಾಸ ಪತ್ರಿಕೆಗಳನ್ನು ಬರೆಸಿ ಪುನರಾವರ್ತಿಸುವುದು, ಇದರಿಂದ ಮಕ್ಕಳಲ್ಲಿ ಪರೀಕ್ಷೆಯ ಬಗ್ಗೆ ಇರುವ ಭಯ, ಗೊಂದಲ ನಿವಾರಣೆಯಾಗಿ ಅವರಲ್ಲಿ ಆತ್ಮ ವಿಶ್ವಾಸ ಉಂಟಾಗುವುದರ ಜೊತೆ ಮುಂದೆ ಬರುವ ಪರೀಕ್ಷೆಯನ್ನು ಧೈರ್ಯದಿಂದ ಎದುರಿಸಿ ಯಶಸ್ಸನ್ನು ಪಡೆಯುವರು.

**ಘಟಕ ಮತ್ತು ಕಿರು ಪರೀಕ್ಷೆಗಳನ್ನು ನಡೆಸುವುದು:**

ಪ್ರತಿ ಘಟಕ ಮುಗಿದ ನಚಿತರ ಆ ಘಟಕಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ತಯಾರಿಸಿ ಘಟಕ ಪರೀಕ್ಷೆಗಳನ್ನು ನಡೆಸುವುದು. ನಿಯಮಾನುಸಾರ ಕಿರು ಪರೀಕ್ಷೆಗಳನ್ನು ನಡೆಸುವುದು.

**ಮಕ್ಕಳ ಆರೋಗ್ಯದ ಬಗ್ಗೆ ಕಾಳಜಿ :**

ಪೋಷಕರ ಜೊತೆ ಚರ್ಚಿಸುವುದರ ಮೂಲಕ ಮಕ್ಕಳ ಆರೋಗ್ಯ ಹಾಗೂ ಅವರ ದೈನಂದಿನ ಆಹಾರದ ಬಗ್ಗೆ ಮತ್ತು ಹೆಚ್ಚು ನೀರು ಕುಡಿಯುವುದರ ಮಹತ್ವದ ಬಗ್ಗೆ ಅರಿವು ಮೂಡಿಸಿ ಓದಿನ ಜೊತೆಗೆ ಆರೋಗ್ಯ ಕಾಪಾಡಿಕೊಳ್ಳಲು ಸಲಹೆ ಮತ್ತು ಮಾರ್ಗದರ್ಶನ ನೀಡುವುದು.

Use E-Papers, Save Trees

Above line hide when print out

# ಸರ್ಕಾರಿ ಪ್ರೌಢಶಾಲೆ,ಕಣಮೇಶ್ವರ ತಾ॥ ಜೇವರ್ಗಿ

## 2020–21 ನೇ ಸಾಲಿನ 10ನೇತರಗತಿ ವಿಜ್ಞಾನ ವಾರ್ಷಿಕ ಕ್ರಿಯಾ ಯೋಜನೆ

**ವಿಷಯ ಶಿಕ್ಷಕರು : ಶ್ರೀ.ರಮೇಶ ಮೂಡಲಗಿ** ಎಂ.ಎಸ್ಸಿ.,ಬಿ.ಇಡಿ.

| ಕ್ರ. ಸಂ | ತಿಂಗಳು | ಅಧ್ಯಾಯಗಳು | ಕೈಗೊಂಡಿರುವ ಕ್ರಮಗಳು | ಅವಧಿ |
|---|---|---|---|---|
| 1 | ಮೇ 2020 | ಪುನರಾವರ್ತನೆ | ವೇಳಾಪಟ್ಟಿ,ತರಗತಿಗಳು ಪ್ರಾರಂಭ ಪೂರ್ವತಯಾರಿ | 1 |
| 2 | ಜೂನ್ – 2020 | 1.ರಾಸಾಯನಿಕ ಕ್ರಿಯೆಗಳು ಮತ್ತು ಸಮೀಕರಣಗಳು<br>2.ಆಮ್ಲಗಳು,ಪ್ರತ್ಯಾಮ್ಲಗಳವ ು ತ್ತು ಲವಣಗಳು | ಪಠ್ಯಬೋಧನೆ ಪ್ರಾರಂಭ<br>ಸಿಸಿಇ ಆಧಾರಿತ ಚಟುವಟಿಕಾ ಬೋಧನೆ ಮತ್ತು ಕಲಿಕೆ.<br>ಚಟುವಟಿಕೆ–1 ರ ಮೌಲ್ಯಮಾಪನ | 17<br>8 |
| 3 | ಜುಲೈ 2020 | ಮುಂದುವರೆದಿದೆ<br>3.ಲೋಹಗಳು ಮತ್ತು ಅಲೋಹಗಳು | ಸಿಸಿಇ ಆಧಾರಿತ ಚಟುವಟಿಕಾ ಬೋಧನೆ ಮತ್ತು ಕಲಿಕೆ.<br>ಚಟುವಟಿಕೆ–2 ರ ಮೌಲ್ಯಮಾಪನ<br>ಸಾಧನಾ ಪರೀಕ್ಷೆ–1<br>ಮೊದಲನೇ ರೂಪಣಾತ್ಮಕ ಮೌಲ್ಯಮಾಪನದ ಕ್ರೋಢೀಕರಣ | 12<br>14 |
| 4 | ಆಗಸ್ಟ್ 2020 | 6.ಜೀವಕ್ರಿಯೆಗಳು<br>7.ನಿಯಂತ್ರಣ ಮತ್ತು ಸಹಭಾಗಿತ್ವ | ಸಿಸಿಇ ಆಧಾರಿತ ಚಟುವಟಿಕಾ ಬೋಧನೆ ಮತ್ತು ಕಲಿಕೆ.<br>ಚಟುವಟಿಕೆ–3 ರ ಮೌಲ್ಯಮಾಪನ | 21<br>4 |
| 5 | ಸೆಪ್ಟೆಂಬರ್ 2020 | 12.ವಿದ್ಯುಚ್ಛಕ್ತಿ<br>13.ವಿದ್ಯುತ್ ಕಾಂತೀಯ ಪರಿಣಾಮಗಳು<br>ನಮ್ಮ ಪರಿಸರ | ಸಿಸಿಇ ಆಧಾರಿತ ಚಟುವಟಿಕಾ ಬೋಧನೆ ಮತ್ತು ಕಲಿಕೆ.<br>ಚಟುವಟಿಕೆ–4 ರ ಮೌಲ್ಯಮಾಪನ<br>ಸಾಧನಾ ಪರೀಕ್ಷೆ–2<br>ಎರಡನೇ ರೂಪಣಾತ್ಮಕ ಮೌಲ್ಯಮಾಪನದ ಕ್ರೋಢೀಕರಣ | 9<br>14 |
| 6 | ಅಕ್ಟೋಬರ್ 2020 | ಪುನರಾವರ್ತನೆ | | 8 |

Use E-Papers, Save Trees
Above line hide when print out

| | | | | |
|---|---|---|---|---|
| 7 | ನವೆಂಬರ್ 2020 | 4.ಕಾರ್ಬನ್ ಮತ್ತು ಅದರ ಸಂಯುಕ್ತಗಳು<br>5.ಧಾತುಗಳ ಆವರ್ತನೀಯ ವರ್ಗೀಕರಣ | ಸಿಸಿಇ ಆಧಾರಿತ ಚಟುವಟಿಕಾ ಬೋಧನೆ ಮತ್ತು ಕಲಿಕೆ.<br>ಚಟುವಟಿಕೆ–5 ರ ಮೌಲ್ಯಮಾಪನ<br>ಸಾಧನಾ ಪರೀಕ್ಷೆ–2 | 22 |
| 8 | ಡಿಸೆಂಬರ್ 2020 | 8.ಜೀವಿಗಳು ಹೇಗೆ ಸಂತಾನೋತ್ಪತ್ತಿ ನಡೆಸುತ್ತವೆ<br>9.ಅನುವಂಶೀಯತೆ ಮತ್ತು ಜೀವ ವಿಕಾಸ | ಸಿಸಿಇ ಆಧಾರಿತ ಚಟುವಟಿಕಾ ಬೋಧನೆ ಮತ್ತು ಕಲಿಕೆ.<br>ಚಟುವಟಿಕೆ–6 ರ ಮೌಲ್ಯಮಾಪನ<br>ಮೂರನೇ ರೂಪಣಾತ್ಮಕ ಮೌಲ್ಯಮಾಪನದ ಕ್ರೋಢೀಕರಣ | 25 |
| 9 | ಜನವರಿ 2021 | 10.ಬೆಳಕು,ಪ್ರತಿಫಲನ ಮತ್ತು ವಕ್ರೀಭವನ | ಸಿಸಿಇ ಆಧಾರಿತ ಚಟುವಟಿಕಾ ಬೋಧನೆ ಮತ್ತು ಕಲಿಕೆ.<br>ಚಟುವಟಿಕೆ–7 ರ ಮೌಲ್ಯಮಾಪನ | 25 |
| 10. | ಫೆಬ್ರವರಿ 2021 | 11.ಮಾನವನ ಕಣ್ಣು ಮತ್ತು ವರ್ಣಮಯ ಜಗತ್ತು<br>14.ಶಕ್ತಿಯ ಆಕರಗಳು<br>16.ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆ | ಸಿಸಿಇ ಆಧಾರಿತ ಚಟುವಟಿಕಾ ಬೋಧನೆ ಮತ್ತು ಕಲಿಕೆ.<br>ಚಟುವಟಿಕೆ–8 ರ ಮೌಲ್ಯಮಾಪನ<br>ನಾಲ್ಕನೇ ರೂಪಣಾತ್ಮಕ ಮೌಲ್ಯಮಾಪನದ ಕ್ರೋಢೀಕರಣ | 24 |
| 11 | ಮಾರ್ಚ್ 2021 | ಪುನರಾವರ್ತನೆ<br>ರಾಜ್ಯಮಟ್ಟದ ಪೂರ್ವ ಸಿದ್ಧತಾ ಪರೀಕ್ಷೆ | | |
| 12 | ಮಾರ್ಚ್ /ಏಪ್ರಿಲ್ 2021 | 2020 ನೇ ಏಪ್ರಿಲ್‌ನಲ್ಲಿ ವಾರ್ಷಿಕ ಪರೀಕ್ಷೆಗಳು ಪ್ರಾರಂಭ | | |

ವಿಷಯ ಶಿಕ್ಷಕರು　　　　　　　　ಮುಖ್ಯ ಶಿಕ್ಷಕರು

Use E-Papers, Save Trees
Above line hide when print out